# ಪ್ರವಾಸ ಪ್ರಸಂಗ – ೨

ನಮ್ಮ ಲೇಹ್–ಲದ್ದಾಕ್ ಸ್ಯೆಕಲಿಂಗ್ ಎಕ್ಸ್‌ಪೆಡಿಷನ್‌ನ ಮಾರ್ಗಮಧ್ಯದಲ್ಲಿ ನಾವು ಎರಡನೇ ದಿನದ ಸಂಜೆ ಉಳಿದುಕೊಂಡಿದ್ದು ಲೇಹ್–ಶ್ರೀನಗರ ಹೆದ್ದಾರಿಯ ಮೇಲಿದ್ದ ಸಣ್ಣ ಹಳ್ಳಿ – 'ನುರ್ಲಾ'ದಲ್ಲಿ. ನಮ್ಮ ಎಡಕ್ಕೆ ಲೇಹ್–ಶ್ರೀನಗರ ಹೆದ್ದಾರಿಯುದ್ದಕ್ಕೂ ಸಿಂಧೂ ನದಿ ಹರಿದುಬರುತ್ತಿತ್ತು. ಮಾರ್ಗ ಮಧ್ಯೆ ಹಲವಾರು ಉಪನದಿಗಳನ್ನು ತನ್ನ ತೆಕ್ಕೆಯೊಳಕ್ಕೆ ಸೇರಿಸಿಕೊಳ್ಳುತ್ತ, ಕೆಲವೆಡೆ ರಸ್ತೆಯ ಮಟ್ಟಕ್ಕೇ ಹರಿಯುತ್ತ, ಇನ್ನೂ ಕೆಲವೆಡೆ ಐವತ್ತರವತ್ತು ಅಡಿ ಆಳದ ಕಣಿವೆ ತೋಡಿಕೊಂಡು ಹರಿಯುತ್ತ, ನಮ್ಮೊಡನೆ ಬರುತ್ತಿದ್ದ ಈ ಸಿಂಧೂ ನದಿಯ ದಂಡೆಯ ಮೇಲೆ ನುರ್ಲಾದಲ್ಲಿ ಕಟ್ಟಲಾಗಿದ್ದ ರಿಸಾರ್ಟ್ ಒಂದರಲ್ಲಿ ನಮ್ಮ ಎರಡನೇ ದಿನದ ಮೊಕ್ಕಾಂ.

ಎರಡು ದಿನಗಳ (ಸಮುದ್ರ ಮಟ್ಟದಿಂದ ಸುಮಾರು ೧೩,೦೦೦ ಸಾವಿರ ಅಡಿಗಳ ಎತ್ತರದಲ್ಲಿ ಪ್ರತಿಶತ ಐವತ್ತರಿಂದ ಅರವತ್ತರಷ್ಟೇ ಆಮ್ಲಜನಕವಿದ್ದ ಗುಡ್ಡಗಾಡು ರಸ್ತೆಯಲ್ಲಿ ಎರಡು ದಿನಕ್ಕೆ ಸರಿ ಸುಮಾರು ತೊಂಭತ್ತು ಕಿಲೋಮೀಟರ್) ಸ್ಯೆಕಲಿಂಗ್‌ನಿಂದಾಗಿ ನಮ್ಮ ಮೈಕೈಯೆಲ್ಲ ಹಿಂಡಿಹಾಕಿದಂತಾಗಿ, ತೊಡೆಗಳೆಲ್ಲ ಹಿಡಿದುಕೊಂಡು, ಪೃಷ್ಠವನ್ನೂರಿ ನೆಟ್ಟಗೆ ಕುರ್ಚಿಯಲ್ಲಿ ಕೂರಲೂ(!) ಆಗದಂತ ಪರಿಸ್ಥಿತಿಯಲ್ಲಿ ನಾವಿದ್ದೆವು. ನಾವಿಳಿದುಕೊಂಡಿದ್ದ ರಿಸಾರ್ಟ್ ಹಿಂದಿನ ದಿನದ ಮೊಕ್ಕಾಂಗೆ (ಮೊದಲನೇ ರಾತ್ರಿ ನಾವು ಉಳಿದುಕೊಂಡಿದ್ದು 'ಬಾಸ್ಗೋ'ದ ('ಲದ್ದಾಕಿ' ಸ್ಟೈಲ್ ಶೌಚಾಲಯವಿದ್ದ!) ಗೆಸ್ಟ್ ಹೌಸ್‌ನಲ್ಲಿ) ಹೋಲಿಸಿದರೆ ಸ್ವರ್ಗ ಸಮಾನವಾಗಿತ್ತು. ನದೀ ದಂಡೆಯ ಮೇಲೆ ಟೆಂಟುಗಳು, ಟೆಂಟುಗಳಲ್ಲಿದ್ದ ಮೆತ್ತನ್ನ ಹಾಸಿಗೆಗಳು, ಬೆಚ್ಚಗಿನ ಹೊದಿಕೆಗಳು, ನದಿಯ ಮೇಲೆ ಆ ಕಡೆ ಹೋಗಲಿಕ್ಕೆ ಇದ್ದ ತೂಗು ಸೇತುವೆ. ಸುತ್ತಲೂ ಮುಗಿಲ ನೇರಕ್ಕೆ ನಿಂತು, ತಮ್ಮ ಮಡಿಲೊಳಗೆ ನಮ್ಮನ್ನು ತುಂಬಿಕೊಂಡಂತೆ ಕಾಣುತ್ತಿದ್ದ ಪರ್ವತ ಶ್ರೇಣಿಗಳು, ಚೆನ್ನಾಗಿದ್ದ ರಾತ್ರಿಯ ಊಟ ಎಲ್ಲವೂ ನಮ್ಮ ದಣಿವನ್ನು ಮರೆಸಿದ್ದವು.

ರಾತ್ರಿ ಊಟದ ನಂತರ ನಾನು, ನನ್ನ ಸ್ನೇಹಿತ ಮತ್ತು ನಮ್ಮ ಟೆಂಟ್‌ನ ಸಹವಾಸಿ(?)ಗಳಾಗಿದ್ದ ಮುಂಬೈನ ಡಾಕ್ಟರೊಬ್ಬರು ತುಂಬ ಸರಳ, ಸ್ನೇಹಮಯಿ ಅನ್ನಿಸುತ್ತಿದ್ದ ರಿಸಾರ್ಟ್‌ನ ಮಾಲೀಕನೊಂದಿಗೆ ಮಾತು ಶುರುವಿಟ್ಟುಕೊಂಡೆವು.

"ಈ ಬುದ್ಧಿಸಂ ಬಗ್ಗೆ ಏನು ಹೇಳ್ತೀರಾ?"

"ಏನು ಹೇಳೋದು? ನಮ್ಮ ಧರ್ಮ!"

"ಬುದ್ಧನ ಇಷ್ಟೊಂದು ಅವತಾರಗಳು, ರೂಪಗಳು... ಇವುಗಳನ್ನೆಲ್ಲ ಹೇಗೆ ಅರ್ಥೈಸಿಕೊಳ್ತೀರಾ?"

"ದೇವರಿಗೇನು ಸಾರ್? ನೂರಾರು ರೂಪ! ಬುದ್ಧನದೇ ಸಾವಿರದೆಂಟು ರೂಪಗಳಿವೆ, ಅವನ್ನೆಲ್ಲ ಅರ್ಥಮಾಡಿಕೊಳ್ಳೋಕೆ ನಮಗೆಲ್ಲ ಆಗಲ್ಲ. ಕೇವಲ ಹಸ್ತ ಮುದ್ರಿಕೆಗಳಿಂದಲೇ ಬೇರೆ ಬೇರೆ ಹೆಸರಿರುವ, ಬೇರೆ ರೂಪಿನ ಬುದ್ಧಂದಿರು, ನೂರಾರು ಬೋಧೀಸತ್ವ ಬುದ್ಧಂದಿರಿದಾರೆ. ಅವೆಲ್ಲ ಒಂದೇ ಅಂತಾ ನಂಬಿಕೊಂಡರೆ ಎಲ್ಲಾ ಸುಲಭ!"

"ಯಾಕೆ ಇಲ್ಲಿಯ ಬುದ್ಧಿಸಂ ಇಷ್ಟೊಂದು ವೈವಿಧ್ಯಮಯ, ಸಂಕೀರ್ಣ?"

"ಮೊದಲು ಬುದ್ಧಿಸಂ ಟಿಬೇಟ್ ಪ್ರವೇಶಿಸಿತು. ಟಿಬೇಟಿನ ತಾಂತ್ರಿಕ ದೈವ ಜಗತ್ತಿನ ಜೊತೆಗೂಡಿ, ಕೊನೆಗೆ ಇಲ್ಲಿಗೆ ಬಂತು. ಹಾಗಾಗಿ ಈ ನಮ್ಮ ಬುದ್ಧಿಸಂ ತುಂಬಾ ಸಂಕೀರ್ಣ. ಹೆಣ್ಣು ಬುದ್ಧ, ಹಿಂದೂ ದೇವರುಗಳ (ಮಹಾಕಾಲ) ರೂಪಿನ ಬುದ್ಧ, ಅಥರ್ವಣ ವೇದದ ಯಂತ್ರ–ತಂತ್ರ–ಮಂತ್ರಗಳಿಂದ ಪ್ರಭಾವಿತವಾದ ಬುದ್ಧ, ಹೀಗೇ ಸಾವಿರಾರು ರೂಪ, ಸಾವಿರಾರು ಹೆಸರುಗಳು. ನಿಜವಾದ ತುಂಬಾ ಸರಳವಾದ ಬುದ್ಧಿಸಂ ಬೇಕೂಂದ್ರೆ ನೀವು ದಕ್ಷಿಣಕ್ಕೆ ಹೋಗಬೇಕು–ಶ್ರೀಲಂಕಾ, ಮ್ಯಾನಮಾರ್..."

"ಎಷ್ಟೊಂದು ಬುದ್ಧಂದಿರು, ಇಷ್ಟೊಂದು ಗೋಂಪಾಗಳು (ಗೋಂಪಾ–ಮೋನಾಸ್ಟರಿ–ಬೌದ್ಧ ಮಠ–ಬೌದ್ಧಗುರುಗಳು, ಭಿಕ್ಷುಗಳು, ವಟುಗಳಿಗೆ ಆವಾಸಸ್ಥಾನಗಳು)! ಪ್ರತಿಯೊಂದು ಪರ್ವತದ ತುದಿಯಲ್ಲೂ, ನದಿಯ ತಪ್ಪಲಲ್ಲೂ ಒಂದೊಂದು ಗೊಂಪಾಗಳು! ಎಷ್ಟೂಂತ ನೋಡೋದು?" ನಾನು ಮಾತು ಶುರುವಿಟ್ಟೆ.

"ಅದೇ ಸಾರ್ ನೀವು ಮಾಡಿದ ತಪ್ಪು. ಇಲ್ಲಿ ಪ್ರತಿಯೊಂದು ಗೋಂಪಾ*ಕ್ಕೂ ಅದರದ್ದೇ ಆದರದ್ದೇ ಆದ ಇತಿಹಾಸವಿದೆ, ಅದರದ್ದೇ ಆದ ಗುರು–ಮಹಾಗುರು(ಮಠಾಧೀಶರ)ಗಳ ತಲೆಮಾರುಗಳಿವೆ, ಇಲ್ಲೆಲ್ಲ ಹೋಗುವಾಗ ನೀವು ಗೈಡುಗಳೊಟ್ಟಿಗೆ ಹೋಗಬೇಕು. ಎಲ್ಲವನ್ನೂ ಅರಿಯುವ, ಅಧ್ಯಯನ ಮಾಡುವ ಕುತೂಹಲದೊಂದಿಗೆ ಹೋಗಬೇಕು. ಸುಮ್ಮನೆ ನೋಡಿ ಬರುವುದೇ ಬೇರೆ. ಎಲ್ಲವನ್ನೂ ಅರಿತುಕೊಂಡು ಅಭ್ಯಸಿಸುವುದರ ಮಜಾವೇ ಬೇರೆ. ಭಾರತೀಯರೆಲ್ಲ ಇಷ್ಟೇ ನೋಡಿ! ಒಂದೆರಡು

ಮೊನಾಸ್ಟರಿಗಳನ್ನ ನೋಡಿದ ತಕ್ಷಣ ಗೈಡುಗಳೆದುರು ಕೊರಗಲಾರಂಭಿಸುತ್ತಾರೆ, ಲೇಹ್‌ನಲ್ಲಿ ಮೊನಾಸ್ಟರಿಗಳನ್ನು ಬಿಟ್ರೆ ಇನ್ನೇನೂ ಇಲ್ವೇ ಅನ್ನೋಕೆ ಶುರುಮಾಡಿಬಿಡ್ತಾರೆ. ಆದ್ರೆ ವಿದೇಶಿಯರನ್ನ ನೋಡಿ, ದಿನಗಟ್ಟಲೆ ಒಂದೊಂದು ಮೊನಾಸ್ಟರಿಗಳಲ್ಲಿ ಕಳೀತಾರೆ, ಎಲ್ಲವನ್ನೂ ಗೈಡುಗಳ ಮೂಲಕ (ಕುತೂಹಲಕ್ಕಾಗಿಯಾದರೂ) ತಿಳಿದುಕೊಳ್ತುತ್ತಾರೆ. ಆದ್ರೆ ಇಲ್ಲಿಗೆ ಬರೋ ಭಾರತೀಯರು ನೋಡಿ, ದಿನಕ್ಕೆ ನಾಲ್ಕು ಮೊನಾಸ್ಟರಿಗಳು, ಒಂದು ಸಿಂಧೂ ದರ್ಶನವಾದರೆ ಪಿಕ್‌ನಿಕ್ ಮುಗಿದ ಹಾಗೆಯೇ!" ಅವನ ಮಾತಿಗೆ ನಾವೆಲ್ಲ ಮುಸಿಮುಸಿ ನಕ್ಕೆವು; ಯಾಕೆಂದರೆ ನಮ್ಮ ಸೈಕಲಿಂಗ್ ಶುರುವಾಗುವ ಎರಡು ದಿನಗಳ ಮೊದಲು ನಾವು ಇದನ್ನೇ ಮಾಡಿದ್ದೆವು! ಮಧ್ಯಾಹ್ನ ಒಂದು ಗಂಟೆಗೆಲ್ಲ ಹೊರಟು, ಲೇಹ್‌ನ ಆಸುಪಾಸು–ಹೊರವಲಯದಲ್ಲಿರುವ ಮೂರು ಮೊನಾಸ್ಟರಿಗಳು, ಸಿಂಧೂ ನದೀತಟದ ದರ್ಶನ ಮಾಡಿಕೊಂಡು, ಸಾಕಷ್ಟು ಫೋಟೋಗಳನ್ನು ತೆಗೆದುಕೊಂಡು, ಐದೂವರೆಗೆಲ್ಲ(ಸಂಜೆ ಚಹಾದ ಸಮಯಕ್ಕೆ) ಬೇಸ್ ಕ್ಯಾಂಪಿಗೆ ವಾಪಸ್ಸು ಬಂದಿದ್ದೆವು!

"ಸರಿ, ಈ ಮಠಗಳ ನಿರ್ವಹಣೆ, ಆಮದನಿ ಹೇಗೆ?" ನಮ್ಮ ಸ್ನೇಹಿತ ಡಾಕ್ಟರ್ ಮುಂದಿನ ಪ್ರಶ್ನೆ ಕೇಳಿದರು; ಅವರಿಗೆ ಯಾವಾಗಲೂ ಆರ್ಥಿಕ ಪರಿಸ್ಥಿತಿಯದ್ದೇ ಚಿಂತೆ!

"ಮಠಗಳಿಗೆ ಸಾವಿರಾರು ಎಕರೆ ಬೇಸಾಯದ ಭೂಮಿಯಿದೆ, ತಲತಲಾಂತರದಿಂದ ಬಂದ ಸಂಪತ್ತಿದೆ. ದೇಶ ವಿದೇಶಗಳಿಂದ ಹರಿದು ಬರೋ ಹರಕೆ, ದೇಣಿಗೆಯ ದುಡ್ಡು. ಪ್ರತಿಯೊಂದು ಮಠಕ್ಕೂ (ನಮ್ಮಲ್ಲಿಯ ಹಾಗೆ!) ಅದರದ್ದೇ ಆದ ಜನಾಂಗಗಳ ನಡೆದುಕೊಳ್ಳುವಿಕೆಯಿದೆ. ಅಲ್ಲದೇ ಗೋಂಪಾಗಳಲ್ಲಿ ನಡೆಯೋ ಉತ್ಸವ ಜಾತ್ರೆಗಳಿಂದಲೂ ಹಣ ಬರುತ್ತೆ. ಅಲ್ಲದೇ ಧರ್ಮಗುರುಗಳು ಮನೆ–ಮನೆಗೆ ವಿಶೇಷ ಪೂಜೆಗಳಿಗೆ, ಆಶೀರ್ವಾದಾರ್ಪಣೆಗಳಿಗೆ (ನಮ್ಮಲ್ಲಿಯ ಹಾಗೆ!) ಹೋಗುತ್ತಾರೆ.

"ಲದ್ದಾಕಿ ಜನ ಹೇಗೆ?"

"ಹೇಗೆ ಅಂದ್ರೆ?"

"ಅಂದ್ರೆ ಇವ್ರು ಶ್ರೀಮಂತರಾ ಬಡವರಾ ಅಥ್ವಾ ಮಧ್ಯಮ ವರ್ಗದವರಾ?"

"ಲದ್ದಾಕ್‌ನಲ್ಲಿ ಒಬ್ಬನೂ ಭಿಕಾರಿ ಇಲ್ಲ! ಬಡತನ ಇಲ್ಲವೇ ಇಲ್ಲ. ನಮ್ಮ ಉಡುಗೆ–ತೊಡುಗೆ ನೋಡಿ ಮೋಸ ಹೋಗಬೇಡಿ ಸಾರ್. ಇಲ್ಲಿ ಎಲ್ಲರೂ ಸಂಪನ್ನರು. ನೀವು ಸಂತೆ, ಪೇಟೆ ಬೀದಿಯಲ್ಲೆಲ್ಲ ಸುತ್ತಿ ಬಂದಿರಲ್ಲ, ಗೋಂಪಾಗಳಿಗೆಲ್ಲ ಭೇಟಿ ಕೊಟ್ಟಿರಲ್ಲ, ಅಲ್ಲೆಲ್ಲಾದರೂ ಒಬ್ಬನಾದರೂ ಲಡಾಕಿ ಭಿಕ್ಷೆ ಬೇಡೋದನ್ನ ನೋಡಿದ್ರಾ? ಇಲ್ಲಿಯ ತಿರುಪೆ ಎತ್ತೋರೆಲ್ಲ ಹಿಮಾಚಲದಿಂದಲೋ, ಹರಿಯಾಣದಿಂದಲೋ ಬಂದವರು."

"ಲಡಾಕಿಗಳ ಈ ಆರ್ಥಿಕ ಪರಿಸ್ಥಿತಿಗೆ ಏನು ಕಾರಣ?"

"ಜನಸಂಖ್ಯೆ ಕಮ್ಮಿ ಸಾರ್! ಇಡೀ ಲಡಾಕಿನ ಜನಸಂಖ್ಯೆ ಅಬ್ಬಬ್ಬಾ ಅಂದ್ರೆ ಎರಡರಿಂದ ಮೂರು ಲಕ್ಷ ಇರಬಹುದು. ಬೇಕಾದಷ್ಟು ಭೂಮಿ ಇದೆ, ನೀರೂ ಬೇಕಾದಷ್ಟಿದೆ. ಅಲ್ಲದೇ ಪ್ರತಿಯೊಂದು ಮನೆಯಲ್ಲೂ ಎರಡರಿಂದ ಮೂರು ಜನ ಸೇನೆಯಲ್ಲಿದ್ದಾರೆ – ಆರ್ಮಿಯೋ, ಆರ್ಮಿ ಪೋಲೀಸೋ, ಆರ್ಮಿ ಸ್ಕೌಟೋ ಒಂದಲ್ಲ ಒಂದು ಸರ್ಕಾರಿ ಪೋಸ್ಟಿಂಗ್‌ನಲ್ಲಿ ಇದ್ದೇ ಇರ್ತಾರೆ."

"ಓಹ್! ನಿಮ್ಮಲ್ಲಿ ಸೈನ್ಯಕ್ಕೆ ತುಂಬಾ ಜನ ಸೇರ್ತಾರೆ ಅನ್ಸುತ್ತೆ ಅಲ್ವಾ?"

"ಹೌದು! ಪ್ರತಿಯೊಂದು ಮನೆಯಲ್ಲೂ ಒಬ್ಬರೋ ಇಬ್ಬರೋ ಸೈನ್ಯದಲ್ಲಿ ಇದ್ದೇ ಇರ್ತಾರೆ ಅಂದೆನಲ್ಲಾ! ಇದಲ್ಲದೇ ಕಾರ್ಗಿಲ್ ಯುದ್ಧದ ಸಮಯದಲ್ಲಿ ನಾವು ಪ್ರತಿಯೊಂದು ಹಳ್ಳಿಯಿಂದಲೂ ಮನೆಗೊಬ್ಬಿಬ್ಬರಂತೆ ನೂರಾರು ಜನ ಹೋಗಿ ಸ್ವಯಂಸ್ಫೂರ್ತಿಯಿಂದ ಸೈನ್ಯ ಸೇರಿಕೊಂಡಿಕೊಂಡಿದ್ದರು. ನುರ್ಲಾದಿಂದಲೂ 'ವಾಲಂಟೀಯರ್ಸ್' ಹೋಗಿದ್ವಿ!"

"ಓಹ್! ಹೌದಾ? ಲದ್ದಾಕಿ ಹುಡುಗರಿಗೆ ಸೈನ್ಯದಲ್ಲಿ ವಿಶೇಷ ಮೀಸಲಾತಿ ಇರಬೇಕಲ್ಲಾ!"

"ಹೌದು ಇದೆ. ಇಲ್ಲೇ ಇರೋದ್ರಿಂದಲೇ ಸಮುದ್ರ ಮಟ್ಟದಿಂದ ಇಷ್ಟೆತ್ತರದಲ್ಲಿ ಬದುಕಿ, ಯುದ್ದ ಮಾಡೋಕೆ ನಮಗೆ ಅಕ್ಲಮಟೈಸೇಷನ್‌ನ ಆವಶ್ಯಕತೆಯೇ ಇಲ್ಲ!"

"ನಿಜ ನಿಜ!" ಲೇಹ್‌ಗೆ ಬಂದಿಳಿದ ಮೊದಲನೇ ರಾತ್ರಿ ಎರಡುಗಂಟೆಗೆಲ್ಲ ನಾನು ಏದುಸಿರು ಬಿಡುತ್ತ ಎದ್ದು ಕುಳಿತಿದ್ದೆ! ಉಸಿರೆಳೆದುಕೊಳ್ಳಲು ಗಾಳಿಯೇ ಇಲ್ಲವೆಂದೆನಿಸಿ ಉಸಿರುಗಟ್ಟಿ ನಾನು ನಿದ್ದೆಯಿಂದ ಥಕ್ಕನೆದ್ದು, ಪಕ್ಕದಲ್ಲಿ ಮಲಗಿದ್ದ ನನ್ನ

ಸ್ನೇಹಿತನನ್ನೂ ಎಬ್ಬಿಸಿದ್ದೆ. ಇಬ್ಬರೂ ಅರ್ಧಗಂಟೆ ಹಾಗೇ ಕುಳಿತು, ಧೀರ್ಘವಾಗಿ ಉಚ್ವಾಸ-ನಿಶ್ವಾಸಗಳ ವ್ಯಾಯಾಮ ಮಾಡಿಕೊಂಡು, ಎದೆ ನೀವಿಕೊಂಡು, ನಂತರ ನಮ್ಮ ಸ್ಥಿತಿಗೆ ನಮ್ಮನ್ನು ನಾವೇ ಗೇಲಿ ಮಾಡಿಕೊಂಡು ಮಲಗಿಕೊಂಡಿದ್ದೆವು.

"ಇಲ್ಲಿ ಕಾರ್ಗಿಲ್ ಯುದ್ಧ ಶುರುವಾದಾಗ ನಾವುಗಳೆಲ್ಲ ಹೋಗಿ ಸೈನ್ಯ ಸೇರಿಕೊಂಡೆವಲ್ಲ ಅದೇ ಸಮಯದಲ್ಲಿ ಯುದ್ಧ ಕೈ ಮೀರಬಹುದೆಂದು ಮನಗಂಡು, ಸೇನೆಯವರು ಥಟ್ಟಂತ ಕೆಳಗೆ ದಕ್ಷಿಣದ ಚೆನ್ನೈನಿಂದ, ಹೈದರಾಬಾದ್‌ನಿಂದ ಸೈನಿಕರ ತುಕುಡಿಗಳನ್ನೆಲ್ಲ ಇಲ್ಲಿಗೆ ಕರೆದುಕೊಂಡು ಯುದ್ಧ ಮಾಡಿ ಅಂತ ಬಿಟ್ಟರಲ್ಲ ಆಗ ನೋಡಬೇಕಾಗಿತ್ತು ಫಜೀತಿ. ಇಲ್ಲಿ ದಕ್ಷಿಣದಿಂದ ಬಂದವರಿಗೆ ಅಕ್ಲಮಟೈಸೇಷನ್‌ಗೆ ಸಮಯವೇ ಇರಲಿಲ್ಲ. ನೇರವಾಗಿ ವಿಮಾನದಲ್ಲಿ ಬಂದಿಳಿದವರನ್ನು ಯಾವುದೇ ತರಬೇತಿಯಿಲ್ಲದೇ ಗುಡ್ಡ ಹತ್ತಲು, ಯುದ್ಧ ಮಾಡಲು ಬಿಟ್ಟರು. ನಮಗೆ ಆ ಸೈನಿಕರನ್ನು ಸಂಭಾಳಿಸುವುದೇ ದೊಡ್ಡ ಕೆಲಸವಾಗಿಬಿಟ್ಟಿತು!

"ಯಾಕೇ?"

"ಇನ್ನೇನು? ಆಮ್ಲಜನಕದ ಕೊರತೆಯಿಂದಾಗಿ, ಸರಿಯಾದ ಅಕ್ಲಮಟೈಸೇಷನ್ ಇಲ್ಲದುದರಿಂದ ಆ ಸೈನಿಕರೆಲ್ಲ ಕಾಯಿಲೆ ಬಿದ್ದರು. ವಾಂತಿ, ತಲೆ ಸುತ್ತು ಅಂತೆಲ್ಲ ಆಗಿ ಪಲ್ಮನರಿ ಎಡಿಮಾ ಮುಂತಾದವಕ್ಕೆ ತಿರುಗಿ, ಹೈ ಆಲ್ಟಿಟ್ಯೂಡ್ ಸಿಕ್‌ನೆಸ್‌ನಿಂದಾಗಿ ಸತ್ತೇ ಹೋದರು!"

"ಓಹ್! ಹೌದಾ?"

"ಹೌದು! ಅವರನ್ನೆಲ್ಲ ಎತ್ತಿಕೊಂಡು, ಹೊತ್ತುಕೊಂಡು ಬರೋದೇ ನಮಗೆ ದೊಡ್ಡ ತಲೆನೋವಾಗಿತ್ತು. ನಾವು ಯುದ್ಧ ಮಾಡುವುದೋ, ಅಥಾವಾ ಈ ಸೈನಿಕರ ಯೋಗಕ್ಷೇಮ ನೋಡುವುದೋ ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿ ಬಿಟ್ಟಿತ್ತು. ಯುದ್ಧಭೂಮಿಯಲ್ಲಿ ವೈರಿಯ ಆಕ್ರಮಣಕ್ಕೆ ಐದು ಜನ ಸೈನಿಕರು ಸತ್ತರೆ ನಮ್ಮ ಯುದ್ಧ ಶಿಬಿರಗಳಲ್ಲಿ ಇಪ್ಪತ್ತು ಜನ ಬರೀ ಹೈ ಆಲ್ಟಿಟ್ಯೂಡ್ ಸಿಕ್‌ನೆಸ್‌ನಿಂದಾಗಿ ಪ್ರಾಣಬಿಡುತ್ತಿದ್ದರು."

ನಾವೆಲ್ಲ ಮೌನವಾಗಿ ಕುಳಿತು ನಮ್ಮ ರಿಸಾರ್ಟ್ ಮಾಲೀಕನ ಮಾತುಗಳನ್ನೇ ಆಲಿಸುತ್ತಿದ್ದೆವು. ಎಂದಿನಂತೆ ಡಾಕ್ಟರ್ ಮಾತು ಹೊರಳಿಸಿದರು, "ಭೂಮಿ ಬರಡು ಅಲ್ವಾ ಇಲ್ಲಿ?"

"ಹೌದು! ನೀರಿರೋ ಕಡೆ ಮಾತ್ರ ಹಸಿರು. ಬರಡು ಗುಡ್ಡಗಾಡಿನ ನಡುವೆ ಇಲ್ಲೊಂದು ಹಳ್ಳಿಯಿದೆ. ಒಂದೇ ಮನೆ, ಐದು ಓಟು. ಅಲ್ಲಿಗೆ ಓಟು ಕೇಳೋಕೆ ಹೆಲಿಕ್ಯಾಪ್ಟರ್‌ನಲ್ಲಿ ಬರ್ತಾರೆ ರಾಜಕಾರಣಿಗಳು." ನಾವೆಲ್ಲ ಸೋಜಿಗದ ನಗು ನಕ್ಕೆವು.

"ನಿಮ್ಮ ಈ ಹೈಡ್ರೋ-ಎಲೆಕ್ಟ್ರಿಕ್ ಪವರ್ ಐಡಿಯಾ ಚೆನ್ನಾಗಿದೇರಿ!" ನನ್ನ ಸ್ನೇಹಿತ ಮೊದಲ ಬಾರಿಗೆ ಮಾತನಾಡಿದ.

ನಾವಿಳಿದುಕೊಂಡಿದ್ದ ರೆಸಾರ್ಟ್ ತನ್ನ ದಿನ ನಿತ್ಯದ ಅವಶ್ಯಕತೆಗಳಿಗೆ ಬೇಕಾದ ವಿದ್ಯುಚ್ಛಕ್ತಿಯನ್ನು ತಾನೇ ಉತ್ಪಾದನೆ ಮಾಡಿಕೊಳ್ಳುತ್ತಿತ್ತು. ರೆಸಾರ್ಟ್ ಪಕ್ಕದಲ್ಲಿಯೇ ಮೇಲೆ ಗುಡ್ಡಗಾಡಿನಿಂದಿಳಿದು ಬಂದು ಕೆಳಗಿದ್ದ ಸಿಂಧೂ ನದಿಗೆ ಸೇರುತ್ತಿದ್ದ ಝರಿಯ ನೀರನ್ನು ಅದೇ ಇಳಿಜಾರನ್ನು ಉಪಯೋಗಿಸಿ, ತೊಟ್ಟಿಮಾಡಿಕೊಂಡು, ಪೈಪುಗಳ ಮೂಲಕ ಕೆಳಗೆ ನದೀದಂಡೆಯ ಮೇಲಿದ್ದ ಜನರೇಟರ್‌ನ ಟರ್ಬೈನ್‌ಗಳಿಗೆ ಹಾಯಿಸಿ...

"ಹೂಂ ಸಾರ್. ಸುಮ್ಮನೇ ನೋಡೋಣ ಅಂತಾ ನನ್ನಣ್ಣನ ಮಗ ಮಾಡಿದ ಪ್ರಯೋಗಕ್ಕೆ ಒಪ್ಪಿಗೆ ಕೊಟ್ಟೆ. ಈಗ ಅದೇ ಪವರ್ ಪೂರ್ತಿ ರಿಸಾರ್ಟ್‌ಗೆ ಸಾಕು. ಹೇಗಿದ್ದರೂ ಸಂಜೆ ಏಳರಿಂದ ರಾತ್ರಿ ಹನ್ನೊಂದರ ತನಕ ಮಾತ್ರ ದೀಪ ಉರಿಸೋದು ತಾನೇ!"

"ಅಂದ್ರೆ? ಯಾಕೆ ರಾತ್ರಿ ಹನ್ನೊಂದರ ತನಕ ಮಾತ್ರ ದೀಪಗಳು?"

"ಇಲ್ಲೆಲ್ಲ ಅಷ್ಟೇ ಸಾರ್; ಇದು ಸೇನೆಯವರ ಕಾನೂನು. ಈ ರಸ್ತೆಯುದ್ದಕ್ಕೂ ಶ್ರೀನಗರದ ತನಕ ಎಲ್ಲಾ ಹಳ್ಳಿಗಳಲ್ಲೂ ಇದೇ ನಿಯಮ. ರಾತ್ರಿ ಹನ್ನೊಂದಕ್ಕೆ ಸರಿಯಾಗಿ ಎಲ್ಲ ದೀಪಗಳು ಬಂದ್ ಆಗಿಬಿಡಬೇಕು. ಸಾಮಾನ್ಯವಾಗಿ ವಿದ್ಯುಚ್ಛಕ್ತಿ ಸರಬರಾಜೂ ನಿಂತುಬಿಡುತ್ತದೆ. ಇದೆಲ್ಲ ಗಡಿ ಪ್ರದೇಶದಲ್ಲಿರುವುದರ ಶಾಪ ಇದು; ಸೆಕ್ಯೂರಿಟಿಯ ಪ್ರಶ್ನೆ!"

"ಈವಾಗ ಸೀಸನ್ ಮುಗೀತಿದೆ ಅಂತಿದೀರಾ, ಏನು ಮಾಡ್ತೀರಾ ಇನ್ನು ನಾಲ್ಕು ತಿಂಗಳು", ನಮ್ಮ ಡಾಕ್ಟರ್ ಸ್ನೇಹಿತ  ತಮ್ಮ ಅದೇ ಹಳೇ ಟ್ರ್ಯಾಕಿಗೆ ಬಂದರು.

"ನಾಲ್ಕು ತಿಂಗಳಲ್ಲ ಸಾರ್. ಈಗ ಸೆಪ್ಟೆಂಬರ್ ಅಲ್ವಾ? ಅಕ್ಟೋಬರ್‌ಗೆಲ್ಲ ಈ ರಿಸಾರ್ಟ್ ಬಾಗಿಲು ಹಾಕಿಬಿಡ್ತೀನಿ. ನಂತರ ಬರೋ ವರ್ಷ ಮಾರ್ಚ್ ತನಕ. ಹೆಚ್ಚು ಕಡಿಮೆ ಆರು ತಿಂಗಳು!"

"ಸೋ ಆರು ತಿಂಗಳು ಏನು ಮಾಡ್ತೀರಾ?"

"ಗೋವಾಕ್ಕೆ ಹೋಗ್ತೀನಿ"

"ಏನು ಹಾಲಿಡೇಯಿಂಗಾ?"

"ಹೇ! ಇಲ್ಲಾ ಸಾರ್. ಗೋವಾದಲ್ಲೊಂದು ಹೋಟೇಲ್ ಇದೆ ನಂದು."

"ಓ ಹೌದಾ?"

"ಹೌದು ಸಾರ್. ಆರು ತಿಂಗಳು ಕೆಲ್ಸ ಇಲ್ಲದೇ ಮನೆಯಲ್ಲಿ ಕೂತಿರಬೇಕಲ್ಲಾ. ಅದಕ್ಕೇ ದುಡಿಯೋಕೆ ಒಂದು ದಾರಿ. ನನ್ನ ತಮ್ಮ ಗೋವಾದಲ್ಲಿದ್ದು ಹೋಟೆಲ್ ನೋಡಿಕೋತಿರ್ತಾನೆ. ಈಗ ಚಳಿಗಾಲಕ್ಕೆ ಅಲ್ಲಿ ಸೀಸನ್ನು ತಾನೇ? ನಾನೂ ಅಲ್ಲಿಗೆ ಹೋಗಿ ಅವನೊಂದಿಗೆ ಕೆಲಸ ಮಾಡ್ತೀನಿ. ಮತ್ತೆ ಮಾರ್ಚ್ ಹೊತ್ತಿಗೆಲ್ಲ ವಾಪಸ್ಸು ಬರ್ತೀನಿ. ನಾನೊಬ್ಬನೇ ಅಲ್ಲ, ಈ ತರಹದ ವೃತ್ತಿಯಲ್ಲಿರೋ ಎಲ್ಲರೂ ಇದನ್ನೇ ಮಾಡ್ತಾರೆ. ನನ್ನ ಚಿಕ್ಕಪ್ಪ ಕಲ್ಕತ್ತಾದಲ್ಲಿ ಹೋಟೇಲ್ ಇಟ್ಕೊಂಡಿದಾನೆ. ಗೋವಾಗಿಂತ ಮೊದಲು ನಾನು ಅವನೊಂದಿಗೇ ಕೆಲಸ ಮಾಡ್ತಾ ಇದ್ದೆ. ನಂತರ ನನ್ನದೇ ಚಿಕ್ಕದಾದ ಹೋಟೆಲ್ ತೆಗೆದೆ ವೈಜಾಗ್‌ನಲ್ಲಿ! ಈಗ ಅದನ್ನ ನನ್ನ ಚಿಕ್ಕಪ್ಪನ ಮಗ ನೋಡ್ಕೋತಾ ಇದಾನೆ. ನಾನೂ ನನ್ನ ತಮ್ಮ ಇಲ್ಲಿಯ ಈ ಹೋಟೆಲ್ ಮತ್ತು ಗೋವಾದ ಹೋಟೆಲ್ ಎರಡನ್ನೂ ನಡೆಸ್ಕೊಂಡು ಹೋಗ್ತಾ ಇದೀವಿ!"

"ಹೇಗನ್ನಿಸುತ್ತೆ ನಿಮಗೆ?"

"ಹೇಗನಿಸುತ್ತೆ ಅಂದ್ರೆ?"

"ನೀವು ಇಂಡಿಯಾ ಎಲ್ಲ ಸುತ್ತಿದೀರಾ, ಗೋವಾದಲ್ಲೂ ಹೋಟೇಲ್ ಮಾಡಿಕೊಂಡಿದೀರಾ. ಗೋವಾ ಚಂದ ಅನ್ಸುತ್ತೋ ಅಥ್ವಾ ಲದ್ದಾಕ್?"

"ಏನು ಹೇಳ್ತೀರಾ ಸಾರ್! ಗೋವಾ ಗೋವಾನೇ ಲದ್ದಾಕ್ ಲದ್ದಾಕೇ!"

"ಅಂದ್ರೆ?"

"ಏನೇ ಇರ್ಲಿ, ಇದು ನಾನು ಹುಟ್ಟಿದೂರು ಸಾರ್! ನನ್ನ ಹುಟ್ಟಿದೂರಿಗಿಂತ ಬೇರೆ ಯಾವುದಾದ್ರೂ ಜಾಗ, ಅದು ಸ್ವರ್ಗವೇ ಆಗಲಿ ನನಗೆ ಚಂದ ಅನ್ನಿಸೋದುಂಟೇ!" ನಾವೆಲ್ಲ ಸಮ್ಮತಿ–ಸೂಚಕವಾಗಿ ತಲೆದೂಗಿದೆವು.

ಆಗಲೇ ರಾತ್ರಿ ಹತ್ತುಗಂಟೆಯಾಗುತ್ತಿತ್ತು. ನಾನು ದೊಡ್ಡದಾಗಿ ಆಕಳಿಸಿದೆ. ಬೆಂಗಳೂರಿನಲ್ಲಿರುವಾಗ ರಾತ್ರಿ ಒಂದಾದರೂ ನಿದ್ದೆ ಬರದ ನನಗೆ ಅಲ್ಲಿ ಎಂಟೂವರೆಗೆಲ್ಲ ಆಕಳಿಕೆ–ತೂಕಡಿಕೆ ಶುರುವಾಗಿಬಿಡುತ್ತಿತ್ತು! ಇನ್ನೂ ಮೂರುದಿನದ ಸೈಕಲಿಂಗ್ ನಮ್ಮ ಮುಂದಿತ್ತು. ಎರಡನೇ ದಿನದ ಈ ಸೈಕಲಿಂಗ್ ಮೊದಲನೇ ದಿನದಷ್ಟು ಸುಸ್ತೆನಿಸದಿದ್ದರೂ ಮುಂದಿನ ದಾರಿ ಹೇಗಿದೆಯೋ ಎಂಬ ಭಯಾತಂಕಗಳು ನಮ್ಮನ್ನು ಬೇಗನೇ ಹಾಸಿಗೆ ಸೇರಿಕೊಂಡು ವಿಶ್ರಾಂತಿ ತೆಗೆದುಕೊಳ್ಳುವಂತೆ ಪ್ರೇರೇಪಿಸುತ್ತಿದ್ದವು (ಯಾಕೆಂದರೆ ಈ ಎರಡನೇ ದಿನದ ಬೆಳಿಗ್ಗೆ ನಾವು ಸೈಕಲಿಂಗ್ ಶುರುಮಾಡಿದಾಗ ನಮಗೆ ಎದುರಾಗಿದ್ದು ಸುರಳಿಸುತ್ತಿದ ನಾಲ್ಕು ಕಿಲೋಮೀಟರ್‌ನ ಏರು ಹಾದಿ, ನಂತರವೂ ಸುಮಾರು ಹನ್ನೆರಡು ಕಿಲೋಮೀಟರ್ ಸಮತಟ್ಟು ಅನ್ನಿಸೋ (ಆದರೆ ಸಮತಟ್ಟಾಗಿರದ) ಮೋಸದ ಏರು ರಸ್ತೆ). ನಾನು ಆಕಳಿಸಿದ್ದು ನೋಡಿ ಎಲ್ಲರೂ ನಕ್ಕರು. ಹೋಟೆಲಿನ ಮಾಲೀಕ 'ಸರಿ ಸಾರ್ ಮಲಗಿಕೊಳ್ಳಿ, ನಾಳೆ ಬೆಳಿಗ್ಗೆ ಏಳು ಗಂಟೆಗೆಲ್ಲ ತಿಂಡಿ ತಯ್ಯಾರಾಗುತ್ತೆ, ಸೂರ್ಯ ಹುಟ್ಟೋಕೆ ಮುಂಚೇನೇ ರಸ್ತೆಗೆ ಇಳಿದರೆ ಎಲ್ಲವೂ ಸುಲಭವಾಗುತ್ತದೆ!' ಎಂದ. ನಾವೆಲ್ಲರೂ ಅವನಿಗೆ ಗುಡ್‌ನೈಟ್ ಹೇಳಿ ನಮ್ಮ ಡೇರೆಗಳಿಗೆ, ಬೆಚ್ಚಗಿನ ಹಾಸಿಗೆ ಹೊದಿಕೆಗಳಿಗೆ ನಮ್ಮ ಸೋತುಹೋದ ದೇಹಗಳೊಂದಿಗೆ ತೆರಳಿದೆವು. ಭಾರದ ಹೊದಿಕೆ ಹೊದ್ದುಕೊಂಡು ದೀಪವಾರಿಸಿಕೊಂಡು, ಮೈಕೈಯನ್ನೆಲ್ಲ ನೆಟ್ಟಗೆ ಮಾಡಿಕೊಂಡು, ಅಂಗಾತ ಮಲಗಿಕೊಂಡವರಿಗೆ ಡೇರೆಗಳ ಕೆಳಗೆ ಕೊರಕಲಿನಲ್ಲಿ ಹರಿಯುತ್ತಿರುವ ಸಿಂಧೂನದಿ ತನ್ನ ತಣ್ಣನೆಯ ಅಲೆಗಳ ಜುಳುಜುಳುನಾದದಿಂದ ಜೋಗುಳ ಹಾಡುತ್ತಿತ್ತು.

**ಹ್ಯಾವ್ ಎ ನೈಸ್ ಡೇ**

**ಶಿವಕುಮಾರ ಕೆ. ಎಸ್.** ***shivuks@gmail.com***